**ದಿನಾಂಕ: 07-11-2020 ರಂದು ಸಮಯ 11.00 ಗಂಟೆಗೆ ವಾರ್ಡ್ ಸಂಖ್ಯೆ: 156 ಶ್ರೀನಗರಕ್ಕೆ ಸಂಬಂಧಪಟ್ಟಂತೆ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು

1. ಶ್ರೀಮತಿ. ಶಿಲ್ಪಶ್ರೀ. ಬಿ.ಜೆ. ಸಹಾಯಕ ಅಭಿಯಂತರರು – ಸದಸ್ಯ ಕಾರ್ಯದರ್ಶಿ
2. ಶ್ರೀಮತಿ. ಕವಿತಾ (ಹಿ.ಆ.ಪ) – ಸದಸ್ಯರು
3. ಶ್ರೀಮತಿ. ಲಾವಣ್ಯ (ಕಿ.ಆ.ಪ) – ಸದಸ್ಯರು
4. ಶ್ರೀ ಯೋಗೇಶ್ (ಕಂ.ವ.)– ಸದಸ್ಯರು
5. ಶ್ರೀ ಕೃಷ್ಣ (ಬೀದಿ ದೀಪ) – ಸದಸ್ಯರು
6. ಶ್ರೀ. ವೆಂಕಟೇಶ್. ಠಾಣಾಧಿಕಾರಿಗಳು. ಸಂಚಾರಿ ವಿಭಾಗ
7. ಶ್ರೀ. ರವಿ. ಠಾಣಾಧಿಕಾರಿಗಳು. ಕಾನೂನು ಸುವ್ಯವಸ್ಥೆ. ಹನುಮಂತನಗರ
8. ಶ್ರೀ. ಜಗದೀಶ್
9. ಶ್ರೀ. ಧನಂಜಯ
10. ಶ್ರೀ. ವೆಂಕಟೇಶ್
11. ಶ್ರೀಮತಿ. ಜಯಮ್ಮ

1) **BWSSB ಇಲಾಖೆಗೆ ಸಂಬಂಧಪಟ್ಟ ವಿಷಯಗಳು:**

BWSSB ಇಲಾಖೆಗೆ ಸಂಬಂಧಪಟ್ಟ ಒಳಚರಂಡಿ ಲೈನ್‌ನನ್ನು ಹಾಗೂ ಮಾದೇಶ್ವರ ಕಾಂಪೌಂಡ್, ವೀವರ್ಸ್ ಕಾಲೋನಿ ಸುತ್ತಮುತ್ತ ಪ್ರದೇಶದಲ್ಲಿ ನೀರಿನ ಸಮಸ್ಯೆ ಬಗೆಹರಿಸಲು ಕೋರಿರುತ್ತಾರೆ. ಲೈನ್‌ನನ್ನು ಬದಲಾಯಿಸುವುದಾಗಿ ಉಪಸ್ಥಿತರಿದ್ದ ಸಂಬಂಧಪಟ್ಟ ಇಲಾಖೆಯ ಸಹಾಯಕ ಅಭಿಯಂತರರಿಗೆ ಹಿಂದಿನ ಸಭೆಯಲ್ಲಿ ತಿಳಿಸಿರುತ್ತದೆ. ಇದಕ್ಕೆ ಸಭೆಯಲ್ಲಿ ಉಪಸ್ತಿತರಿದ್ದ ಸಹಾಯಕ ಅಭಿಯತಂತರರು ಸದರಿ ಕಾಮಗಾರಿಯು ಪ್ರಾರಂಭಿಸುವುದಾಗಿ ತಿಳಿಸಿದರು ಹಾಗೂ ಕುಡಿಯುವ ನೀರಿನ ಸರಬರಾಜು ಮಾಡಲು ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿರುತ್ತಾರೆ.

2) **ಕಾಮಗಾರಿ ಇಲಾಖೆ:**

50 ಅಡ್ಡಿ ರಸ್ತೆ ಹಾಗೂ Pipline ರಸ್ತೆಯಲ್ಲಿ ಪಾಟ್‌ಹೋಲ್ಸ್ ಬಿದ್ದಿದ್ದು ಇದಕ್ಕೆ Wet Mix ಹಾಕಿ ಮುಚ್ಚಲು ತಕ್ಷಣ ಕ್ರಮಕೈಗೊಂಡು ಸರಿಪಡಿಸಲು ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತ್ತು. ಸಭೆಯಲ್ಲಿ ಉಪಸ್ತಿತರಿದ್ದ ಸಹಾಯಕ ಅಭಿಯತಂತರರು ಸದರಿ ಪಾಟ್‌ಹೋಲ್ಸ್ ಮುಚ್ಚುವುದಾಗಿ ತಿಳಿಸಿದರು.

3) **COVID-19 ಕಾಯಿಲೆ ಕುರಿತು:**

COVID-19 ಕಾಯಿಲೆ ಸಾರ್ವಜನಿಕರ ಹಿತದೃಷ್ಟಿಯಿಂದ ವಾರ್ಡ್‌ನ ನಾಗರೀಕರಿಗೆ ಉಚಿತ Mobile Team/Pc & Sc team/Mobile testing team ರಚಿಸಿದ್ದು, ಪ್ರತಿ ದಿನ ಜನರಿಗೆ ಉಚಿತ ಕೊವಿಡ್ ಪರೀಕ್ಷೆಗೆ ಒಳಪಡಿಸುತ್ತಿರುವುದಾಗಿ ಸಭೆಯಲ್ಲಿ ಉಪಸ್ತಿತರಿದ್ದ ಹಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿರುತ್ತಾರೆ.

4) **ಸಂಚಾರಿ ವಿಭಾಗ:**

ಶ್ರೀನಗರ ಬಸ್ ಸ್ಟ್ಯಾಂಡ್ ಹಾಗೂ ಬೃಹತ್ ನೀರುಗಾಲುವೆ ಮೇಲೆ ಅನಧಿಕೃತವಾಗಿ ನಿಲುಗಡೆ ಮಾಡಿದ ವಾಹನಗಳನ್ನು ತೆರವುಗೊಳಿಸಲು ಸಂಬಂಧಪಟ್ಟ ಪೋಲೀಸ್ ಇಲಾಖೆಗೆ ಕೋರಲಾಯಿತ್ತು. ಈ ಬಗ್ಗೆ ಕ್ರಮವಹಿಸಲು ತಿಳಿಸಲಾಗಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ವಾಹನಗಳನ್ನು ತೆರವುಗೊಳಿಸಲು ಕೋರಿರುತ್ತಾರೆ.

5) **ಪಾದಚಾರಿ ಮಾರ್ಗ ತೆರವುಗೊಳಿಸುವ ಬಗ್ಗೆ.**

ಶ್ರೀನಗರ ಬಸ್ ನಿಲ್ದಾಣದ ಸುತ್ತಮುತ್ತ ಬಿದಿ ವ್ಯಾಪಾರಿಗಳು ಪಾದಚಾರಿ ಮಾರ್ಗದ ಮೇಲೆ ವ್ಯಾಪಾರವನ್ನು ಮಾಡುತ್ತಿದ್ದು ಇದರಿಂದ ಪಾದಚಾರಿ ಮಾರ್ಗದಲ್ಲಿ ಒಡಾಡುವ ಸಾರ್ವಜನೀಕರಿಗೆ ತುಂಬ ತೊಂದರೆ ಯಾಗುತ್ತಿದ್ದರಿಂದ ಅದನ್ನು ತೆರವುಗೊಳಿಸಲು ಸಭೆಯಲ್ಲಿ ಹಾಜರಿದ್ದ RWAರವರು ವಿನಂತಿಸಿರುತ್ತಾರೆ. ಅದಕ್ಕೆ ಅಧ್ಯಕ್ಷರು ಹಾಗೂ

Scanned with CamScanner

ನೋಡಲ್ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದ ಸಹಾಯಕ ಅಭಿಯಂತರರು ಮತ್ತು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಪೊಲೀಸ್ ಇಲಾಖೆಯ ಸಹಕಾರದಿಂದ ತುರ್ತಾಗಿ ತೆರವುಗೊಳಿಸಲು ಕ್ರಮವಹಿಸಲು ಸೂಚಿಸಿದರು.

6) **ಆರೋಗ್ಯ ಇಲಾಖೆ**

ಶ್ರೀನಗರ ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರು ಕಸವನ್ನು ಹಾಕುತ್ತಿದ್ದು ಅದನ್ನು ತಡೆಗಟ್ಟಲು ಮತ್ತು ಶುಚಿಯಾಗಿ ಇಡಲು ಕ್ರಮ ಕೈಗೊಳ್ಳಲು ಕೋರಿರುತ್ತಾರೆ. ಈ ವಿಷಯವಾಗಿ ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ವ್ಯಾಪ್ತಿಯಲ್ಲಿ ಪರಿಶೀಲಿಸಿ ಕಸವನ್ನು ಹಾಕದಂತೆ ಮಾರ್ಷಲ್‌ಗಳಿಗೆ ಗಸ್ತು ತಿರುಗಿ ಕಸ ಹಾಕಿದವರಿಗೆ ಸ್ಥಳದಲ್ಲಿಯೇ ದಂಡ ವಿಧಿಸಲು ತಿಳಿಸಲಾಗಿದೆ ಹಾಗೂ ಸಾರ್ವಜನಿಕರಿಂದ ಯಾವುದೇ ದೂರುಗಳು ಬರದಂತೆ ವಾರ್ಡ್‌ನಲ್ಲಿ ಸ್ವಚ್ಛವಾಗಿಡಲಾಗಿದೆ ಎಂದು ತಿಳಿಸಿರುತ್ತಾರೆ.

ಶ್ರೀನಗರ ಕೆಲವು ಭಾಗದಲ್ಲಿ Mosquito Spray ಔಷಧಿ ಸಿಂಪಡಿಸಲು ಸಭೆಯಲ್ಲಿ ಹಾಜರಿದ್ದ RWA ವಿನಂತಿಸಿದರು. ಸದರಿ ವಿಷಯದ ಕುರಿತು ಸಭೆಯಲ್ಲಿ ಉಪಸ್ಥಿತರಿದ್ದ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಕ್ರಮವಹಿಸಲು ಸೂಚಿಸಲಾಗಿದೆ.

ಸಾರ್ವಜನಿಕರು Mask ಹಾಕದೆ ಒಡಡುತಿರುವ ಮಾರ್ಷಲ್‌ಗಳು 250/- ದಂಡ ವಿಧಿಸುತಿರುವರು.

7) **ಬೆಸ್ಕಾಂ ಇಲಾಖೆ :**

ವಾರ್ಡ ವಯಾಪ್ತಿಯ ಕೆಲವು ಭಾಗದಲ್ಲಿ ವಿದ್ಯುತ್ Lineಗಳಿಗೆ ಮರದ ರಂಬೆಗಳು ತಗುಲಿರುವುದರಿಂದ ಸದರಿ ಮರಗಳ ರೆಂಬೆಯನ್ನು ಬೆಸ್ಕಾಂ ಇಲಾಖೆಯವರು ಕತ್ತರಿಸಿ ತೆರವುಗೊಳಿಸದೇ ರಸ್ತೆಯಲ್ಲಿ ಅಲ್ಲಲ್ಲಿಯೇ ಬಿಟ್ಟು ಹೋಗಿರುವುದರಿಂದ ಸಾರ್ವಜನಿಕರಿಗೆ ತುಂಬ ತೊಂದರೆ ಆಗಿರುತ್ತದೆ ಹಾಗೂ ತೆರವು ಗೊಳಿಸಲು ಸಭೆಗೆ ಹಾಜರಿದ್ದ RWA ರವರು ವಿನಂತಿಸಿರುತ್ತಾರೆ. ಈ ಬಗ್ಗೆ ಬೆಸ್ಕಾಂ ಇಲಾಖೆಗೆ ಸದರಿ ಮರದ ಕೊಂಬೆಗಳನ್ನು ತೆರವುಗೊಳಿಸಲು ಪತ್ರ ಬರೆಯಲ್ಲು ಉಪಸ್ಥಿತರಿದ್ದ ಸಹಾಯಕ ಅಭಿಯತಂತರರಿಗೆ ಸೂಚಿಸಲಾಯಿತು.

| | |
|---|---|
| ಕಾರ್ಯದರ್ಶಿ | ಅಧ್ಯಕ್ಷರು ವಾರ್ಡ ಸಮಿತಿ |
| ಸಹಾಯಕ ಅಭಿಯಂತರರು | ಹಾಗೂ ನೊಡಲ್ ಅಧಿಕಾರಿಗಳು |
| ವಾರ್ಡ ಸಂಖ್ಯೆ-156 ಶ್ರೀನಗರ | ವಾರ್ಡ ಸಂಖ್ಯೆ-156 ಶ್ರೀನಗರ |

ಪ್ರತಿಯನ್ನು,

1. ಜಂಟಿ ಆಯುಕ್ತರು (ದಕ್ಷಿಣ) ರವರಿಗೆ ಮಾಹಿತಿಗಾಗಿ.
2. ಕೌನ್ಸಿಲ್ ಕಾರ್ಯದರ್ಶಿ ರವರಿಗೆ ಮಾಹಿತಿಗಾಗಿ.
3. ಮುಖ್ಯ ಅಭಿಯಂತರರು(ದ) ರವರಿಗೆ ಮಾಹಿತಿಗಾಗಿ.
4. ಉಪ ಆಯುಕ್ತರು(ದ) ರವರಿಗೆ ಮಾಹಿತಿಗಾಗಿ.
5. ಅಧೀಕ್ಷಕ ಅಭಿಯಂತರರು(ದ) ರವರಿಗೆ ಮಾಹಿತಿಗಾಗಿ.
6. ಕಾರ್ಯಪಾಲಕ ಅಭಿಯಂತರರು ರವರಿಗೆ ಮಾಹಿತಿಗಾಗಿ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಸವನಗುಡಿ ಉಪವಿಭಾಗ, ಬಿ.ಬಿ.ಎಂ.ಪಿ ರವರಿಗೆ ಮಾಹಿತಿಗಾಗಿ.
8. ಕಛೇರಿ ಕಡತಕ್ಕೆ .

Scanned with CamScanner